# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಮಾನ್ಯ ಸದಸ್ಯರ ಹೆಸರು | :ಶ್ರೀ ರಮೇಶ್ ಬಾಬು (ನಾಮನಿರ್ದೇಶನ ಹೊಂದಿದವರು) |
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | :**188** |
| ಉತ್ತರಿಸಬೇಕಾದ ದಿನಾಂಕ | :28.01.2026 |
| ಉತ್ತರಿಸಬೇಕಾದ ಸಚಿವರು | :ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಕರ್ನಾಟಕ ಗೃಹ ಮಂಡಳಿಯು ಇಲ್ಲಿಯವರಿಗೆ ಎಷ್ಟು ನಾಗರೀಕ ನಿವೇಶನಗಳನ್ನು ಸರ್ಕಾರಕ್ಕೆ/ ಸಂಘ ಸಂಸ್ಥೆಗಳಿಗೆ/ಅರೆ ಸರ್ಕಾರಿ ಸಂಸ್ಥೆಗಳಿಗೆ ಹಂಚಿಕೆ ಮಾಡಿರುತ್ತದೆ; (ತಾಲ್ಲೂಕುವಾರು ವಿವರಗಳನ್ನು ಒದಗಿಸುವುದು) | ಕರ್ನಾಟಕ ಗೃಹ ಮಂಡಳಿಯು ಇಲ್ಲಿಯವರೆಗೆ 299 ನಾಗರೀಕ ಸೌಲಭ್ಯದ ನಿವೇಶನಗಳನ್ನು ಸರ್ಕಾರಕ್ಕೆ/ಸಂಘ ಸಂಸ್ಥೆಗಳಿಗೆ/ಅರೆ ಸರ್ಕಾರಿ ಸಂಸ್ಥೆಗಳಿಗೆ ಹಂಚಿಕೆ ಮಾಡಿರುತ್ತದೆ. ವಿವರಗಳನ್ನು ಅನುಬಂಧ-1 ರಲ್ಲಿ ಒದಗಿಸಲಾಗಿದೆ. |
| ಆ) | ಕರ್ನಾಟಕ ಗೃಹ ಮಂಡಳಿಯಲ್ಲಿ ಎಷ್ಟು ನಾಗರೀಕ ನಿವೇಶನಗಳು ಹಂಚಿಕೆಗೆ ಲಭ್ಯವಿರುತ್ತದೆ; (ನಾಗರೀಕ ನಿವೇಶನಗಳ ವಿವರಗಳನ್ನು ಒದಗಿಸುವುದು) | ಕರ್ನಾಟಕ ಗೃಹ ಮಂಡಳಿಯಲ್ಲಿ 448 ನಾಗರೀಕ ಸೌಲಭ್ಯದ ನಿವೇಶನಗಳು ಹಂಚಿಕೆಗೆ ಲಭ್ಯವಿರುತ್ತದೆ. ವಿವರಗಳನ್ನು ಅನುಬಂಧ-2 ರಲ್ಲಿ ಒದಗಿಸಲಾಗಿದೆ. |
| ಇ) | ರಾಜ್ಯ ಸರ್ಕಾರದ ಪರಿಷ್ಕೃತ ನೀತಿಗೆ ಅನುಗುಣವಾಗಿ ಶಿಕ್ಷಣ ಸಂಸ್ಥೆಗಳು ಶಾಲಾ/ಕಾಲೇಜು ಪ್ರಾರಂಭಿಸಲು ಕನಿಷ್ಠ ಎರಡು ಎಕರೆ ನಿವೇಶನ ಹೊಂದಿರಬೇಕು ಎಂಬ ನಿಯಮ ಕೆ.ಹೆಚ್.ಬಿ ಗಮನಕ್ಕೆ ಬಂದಿರುತ್ತದೆಯೇ; | ಹೌದು. |
| ಈ) | ಕೆ.ಹೆಚ್.ಬಿ ಯಲ್ಲಿ ಶಿಕ್ಷಣ ಸಂಸ್ಥೆಗಳಿಗೆ ಹಂಚಿಕೆ ಮಾಡುವ ನಿವೇಶನ ಕನಿಷ್ಠ ಎರಡು ಎಕರೆಗೆ ನಿಗದಿಪಡಿಸಿ ಆದೇಶ ಮಾಡಲಾಗಿದೆಯೇ; ಮಾಡದ ಇದ್ದಲ್ಲಿ, ಯಾವಾಗ ಹಂಚಿಕೆ ನಿಯಮಕ್ಕೆ ತಿದ್ದುಪಡಿ ಮಾಡಲಾಗುವುದು; | ಇಂತಹ ಯಾವುದೇ ಪ್ರಸ್ತಾವನೆ ಕರ್ನಾಟಕ ಗೃಹ ಮಂಡಳಿಯಲ್ಲಿ ಇರುವುದಿಲ್ಲ. |
| ಉ) | ನಾಗರೀಕ ನಿವೇಶನ ಹಂಚಿಕೆಯಲ್ಲಿ ಕೆ.ಹೆಚ್.ಬಿ ನಿಗದಿಗೊಳಿಸಿರುವ ದರವೆಷ್ಟು; ಸರ್ಕಾರದ ಮಾರ್ಗಸೂಚಿ ದರದ ಶೇ.25% ಕ್ಕಿಂತ ನಾಗರೀಕ ನಿವೇಶನ ದರ ಕಡಿಮೆಗೊಳಿಸುವ ಉದ್ದೇಶ ಸರ್ಕಾರಕ್ಕೆ ಇದೆಯೇ ? | ಆಯಾ ಬಡಾವಣೆಯ ಮಧ್ಯಂತರ ನಿವೇಶನದ ಉಪನೋಂದಣಾಧಿಕಾರಿಗಳ ಬೆಲೆಯ ಆಧಾರದ ಮೇಲೆ ಮಂಡಳಿಯು ಬೆಲೆ ನಿಗಧಿಪಡಿಸಿ, ಈ ಕೆಳಕಂಡ ದರದಂತೆ ನಾಗರೀಕ ಸೌಲಭ್ಯದ ನಿವೇಶನಗಳನ್ನು ಹಂಚಿಕೆ ಮಾಡಲಾಗುತ್ತಿದೆ.<br>1. ಕೇಂದ್ರ ಸರ್ಕಾರ, ರಾಜ್ಯ ಸರ್ಕಾರ ಮತ್ತು ಸರ್ಕಾರದ ಅಂಗ ಸಂಸ್ಥೆಗಳಿಗೆ ಶೇ.30 ರಷ್ಟು.<br>2. ಸಾಮಾನ್ಯ ವರ್ಗಕ್ಕೆ ಶೇ.50 ರಷ್ಟು.<br>3. ಎಸ್.ಸಿ/ಎಸ್.ಟಿ ಶೇ.30 ರಷ್ಟು.<br>4. ವಿಕಲಚೇತನರು ನಡೆಸುವ ಸಂಸ್ಥೆಗಳಿಗೆ ಶೇ.30 ರಷ್ಟು ನಿಗಧಿಪಡಿಸಲು.<br>ನಾಗರೀಕ ಸೌಲಭ್ಯದ ನಿವೇಶನಗಳಿಗೆ ಮಾರ್ಗಸೂಚಿ ದರದ ಶೇ.25 ಕ್ಕಿಂತ ಕಡಿಮೆಗೊಳಿಸುವ ಉದ್ದೇಶ ಇರುವುದಿಲ್ಲ. |

ಸಂಖ್ಯೆ :ವಇ 18 ಕೆಹೆಚ್‌ಬಿ 2026

B. Zameer

**(ಬಿ.ಜೆಡ್.ಜಮೀರ್ ಅಹ್ಮದ್ ಖಾನ್)**
ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ
ಕಲ್ಯಾಣ ಸಚಿವರು